International Journal of Kannada Research 2021; 7(2): 168-170

International Journal of Kannada Research
www.kannadajournal.com

ISSN: 2454–5813
IJKR 2021; 7(2): 168-170
© 2021 IJKR
www.kannadajournal.com
Received: 07-02-2021
Accepted: 09-03-2021

**ಡಾ. ಫಕೀರನಾಯ್ಕ ದುಂಡಪ್ಪ ಗಡ್ಡಿಗೌಡರ**
ಕನ್ನಡ ಸಹಾಯಕ ಪ್ರಾಧ್ಯಾಪಕರು ಸರ್ಕಾರಿ ಪ್ರಥಮ ದರ್ಜೆ ಮಹಿಳಾ ಮಹಾವಿದ್ಯಾಲಯ
ಮತ್ತು ಕನ್ನಡ ಸ್ನಾತಕೋತ್ತರ ಅಧ್ಯಯನ ಕೇಂದ್ರ, ಬೈಲಹೊಂಗಲ ಹೊಸೂರ ರಸ್ತೆ 591102 ಜಿಲ್ಲೆ- ಬೆಳಗಾವಿ ರಾಜ್ಯ- ಕರ್ನಾಟಕ

**Corresponding Author:**
**ಡಾ. ಫಕೀರನಾಯ್ಕ ದುಂಡಪ್ಪ ಗಡ್ಡಿಗೌಡರ**
ಕನ್ನಡ ಸಹಾಯಕ ಪ್ರಾಧ್ಯಾಪಕರು ಸರ್ಕಾರಿ ಪ್ರಥಮ ದರ್ಜೆ ಮಹಿಳಾ ಮಹಾವಿದ್ಯಾಲಯ
ಮತ್ತು ಕನ್ನಡ ಸ್ನಾತಕೋತ್ತರ ಅಧ್ಯಯನ ಕೇಂದ್ರ, ಬೈಲಹೊಂಗಲ ಹೊಸೂರ ರಸ್ತೆ 591102 ಜಿಲ್ಲೆ- ಬೆಳಗಾವಿ ರಾಜ್ಯ- ಕರ್ನಾಟಕ

# ಶರಣೆ ಸತ್ಯಕ್ಕನವರ ಸಮಾಜಮುಖಿ ಚಿಂತನೆ – ಪ್ರಸ್ತುತತೆ

**ಡಾ. ಫಕೀರನಾಯ್ಕ ದುಂಡಪ್ಪ ಗಡ್ಡಿಗೌಡರ**

**ಸಾರಾಂಶ**
12 ನೆಯ ಶತಮಾನದಲ್ಲಿ ಬಸವಾದಿ ಶರಣರಂತೆ ಶರಣೆಯರು ನಡೆ-ನುಡಿ ಒಂದಾಗಿಸಿಕೊಂಡು ಬದುಕಿದರು. ತಮ್ಮ ಕಾಲದ ಸಾಮಾಜಿಕ ವ್ಯವಸ್ಥೆಯಲ್ಲಿರುವ ಅಂಕುಡೊಂಕುಗಳ ಕುರಿತು ಚಿಂತನ-ಮಂಥನ ಮಾಡಿದರು. ತಮ್ಮ ಪ್ರತಿಭಾ ಶಕ್ತಿಯಿಂದ ಅರ್ಥಗರ್ಭಿತವಾದ ವಚನಗಳನ್ನು ರಚಿಸಿ ಆರೋಗ್ಯಪೂರ್ಣ ಸಮಾಜ ನಿರ್ಮಿಸಲು ಅವಿಶ್ರಾಂತಿ ಶ್ರಮಿಸಿದರು. ಅಕ್ಕಮಹಾದೇವಿ, ದುಗ್ಗಳೆ, ಕಾಳವ್ವೆ, ಸೂಳೆ ಸಂಕವ್ವ, ಮೋಳಿಗಿ ಮಹಾದೇವಿ, ಆಯ್ದಕ್ಕಿ ಲಕ್ಷಮ್ಮ ಮುಂತಾದ ಮಹಿಳೆಯರು ವಚನ ಕ್ರಾಂತಿಯಲ್ಲಿ ಪಾಲ್ಗೊಂಡು ಸಾಮಾಜಿಕ ಕಳಕಳಿಯನ್ನು ಅಭಿವ್ಯಕ್ತಗೊಳಿಸಿದರು. ಅಂದಿನ ಇತರೆ ಶರಣೆಯರಂತೆ ವಚನ ಆಂದೋಲನದಲ್ಲಿ ಸಕ್ರಿಯವಾಗಿ ತೊಡಗಿಸಿಕೊಂಡು ಸಮಾಜಮುಖಿಯಾಗಿ ಚಿಂತಿಸಿ ಸಾಮಾಜಿಕ ಬದಲಾವಣೆಗೆ ವಚನಾಯುಧವನ್ನು ಸಮರ್ಪಕವಾಗಿ ಬಳಸಿಕೊಂಡು ಹೋರಾಡಿದ ಶ್ರೇಯಸ್ಸು ಸತ್ಯಕ್ಕನವರಿಗೆ ಸಲ್ಲುತ್ತದೆ. ತಮ್ಮ ವಚನಗಳ ಮೂಲಕ ಸಮಾಜದಲ್ಲಿಯ ಭ್ರಷ್ಟಾಚಾರ, ಲಿಂಗ ತಾರತಮ್ಯ, ಮೂಢನಂಬಿಕೆ ಮುಂತಾದ ಅರ್ಥಹೀನ ಮೌಲ್ಯಗಳ ವಿರುದ್ಧ ಧ್ವನಿ ಎತ್ತಿದ ಕ್ರಮ ವಿಶೇಷವಾಗಿದೆ. ಈ ದಿಶೆಯಲ್ಲಿ ಸತ್ಯಕ್ಕನವರ ಸಮಾಜಮುಖಿ ಚಿಂತನೆ ವರ್ತಮಾನದ ಬದುಕಿಗೆ ತುಂಬಾ ಪ್ರಸ್ತುತವೆನಿಸುತ್ತದೆ.

**ಪ್ರಮುಖ ಪದಗಳು:** ಶಂಭುಜಕ್ಕೇಶ್ವರ, ಕಸಗೂಡಿಸುವ ಕಾಯಕ, ಪ್ರಮಥರಾಣಿ, ಲಂಚ ವಂಚನ, ಮೊಲೆಮೂಡಿ, ಜಗದ ಹಾಹೆ, ನೇಮ, ಉದಕ, ಕರ್ಪೂರ, ಲಿಂಗೈಕ್ಯವು, ಹಿರೆಜಂಬೂರ

## ಪ್ರಸ್ತಾವನೆ:

ಬಸವಾದಿ ಪ್ರಮಥರು ಅನುಭವ ಮತ್ತು ಅನುಭಾವಗಳೆರಡನ್ನು ಮೇಳೈಸಿಕೊಂಡು ಸುಂದರ ಸಮಾಜವನ್ನು ಕಟ್ಟುವದಕ್ಕಾಗಿ ವೈಚಾರಿಕ ನಿಲುವಿನಿಂದ ಹರಿತವಾದ ವಚನಗಳನ್ನು ರಚಿಸಿದರು. ನುಡಿದಂತೆ ನಡೆ ಇದೆ ಜನ್ಮಕಡೆ ಎಂಬ ಮಾತಿಗೆ ಸಾಕ್ಷಿಯಾಗಿ ಬದುಕಿ ತೋರಿದರು. ಅನುಭವ ಮಂಟಪದಲ್ಲಿ ಅಂದು ಸುಮಾರು 33 ಕ್ಕೂ ಹೆಚ್ಚು ಶರಣೆಯರು ಸೇರಿ ಸ್ವತಂತ್ರವಾದ ಆಲೋಚನೆಗಳಿಂದ ಸಮಾಜದಲ್ಲಿಯ ವಿಭಿನ್ನ ಮೌಲ್ಯಗಳನ್ನು ಕೈಗೆತ್ತಿಕೊಂಡು ಸ್ವಚ್ಛಂದ ಸಮಾಜ ಕಟ್ಟಲು ಮುಂದಾದರು. ಅಷ್ಟೇ ಅಲ್ಲದೆ ಸ್ತ್ರೀ ಸೃಜನಶೀಲ ಸ್ವಾತಂತ್ರ್ಯಕ್ಕೆ ಮುನ್ನುಡಿ ಬರೆದರು. ಅಂತಹ ಶ್ರೇಷ್ಠ ಶರಣೆಯರಲ್ಲಿ ಸತ್ಯಕ್ಕನವರು ಒಬ್ಬರಾಗಿದ್ದಾರೆ. ಸತ್ಯಕ್ಕನವರು ಶಿವಮೊಗ್ಗ ಜಿಲ್ಲೆಯ ಶಿರಾಳಕೊಪ್ಪ ಸಮೀಪದ ಹಿರೇಜಂಬೂರದಲ್ಲಿ ಜನಿಸಿದ್ದಾರೆ. 'ಶಂಭುಜಕ್ಕೇಶ್ವರ'ನ ಅಂಕಿತದಲ್ಲಿ ಸುಮಾರು 29 ವಚನಗಳನ್ನು ರಚಿಸಿದ್ದಾರೆ.

12 ನೆಯ ಶತಮಾನದಲ್ಲಿ ಶಿವಶರಣರು ಒಂದೊಂದು ಕಾಯಕವನ್ನು ಮಾಡುತ್ತಿದ್ದರು. ವರ್ಣ, ವರ್ಗಭೇದ ಮತ್ತು ಲಿಂಗಭೇದವನ್ನು ಮರೆತು ಸಮಾನಭಾವದಿಂದ, ಸಮಾನಗೌರವದಿಂದ ಕಾಯಕವನ್ನು ಮಾಡುತ್ತಿದ್ದರು. ಅಂದು ಸತ್ಯಕ್ಕನವರು ಶಿವಭಕ್ತರ ಮನೆಯ ಕಸಗೂಡಿಸುವ ಕಾಯಕ ಮಾಡುತಿದ್ದರು. ಕಾಯಕವೇ ಕೈಲಾಸವೆಂಬ ಮಂತ್ರವನ್ನು ತನ್ನ ವೃತ್ತಿಯ ಮಂತ್ರವನ್ನಾಗಿಸಿಕೊಂಡ ಸತ್ಯಕ್ಕನವರು ಕಾಯಕ ನಿಷ್ಠೆಯಿಂದ ಸತ್ಯದ ಪ್ರತಿಪಾದಕರಾಗಿ ಜೀವನವನ್ನು ಸಾಗಿಸುತ್ತಾರೆ. ಸತ್ಯಕ್ಕನವರಿಗೆ ತನ್ನ ಕಾಯಕದ ಬಗ್ಗೆ ಅಪಾರವಾದ ಭಕ್ತಿ ಮತ್ತು ಗೌರವವಿರುತ್ತದೆ. ಕಾಯಕದ ಜೊತೆಜೊತೆಗೆ ಸಮಾಜದ ಮೌಲ್ಯಗಳನ್ನು ಸೂಕ್ಷ್ಮವಾಗಿ ಗ್ರಹಿಸಿದ ಸತ್ಯಕ್ಕನವರು ಅರ್ಥಹೀನ ಆಚರಣೆಗಳನ್ನು, ಸಂಪ್ರದಾಯಗಳನ್ನು ಕಠೋರವಾಗಿ ಖಂಡಿಸುತ್ತಾರೆ. ಅನಿಷ್ಟ ಮೌಢ್ಯಗಳನ್ನು ವಿರೋಧಿಸಿ ಸಮಾಜಮುಖಿಯಾಗಿ ತಮ್ಮನ್ನು ಸಮರ್ಪಿಸಿಕೊಳ್ಳುತ್ತಾರೆ. ಅವರ ಸಮಾಜಮುಖಿ ಚಿಂತನೆಗಳು ಅವರ

ಅನೇಕ ವಚನಗಳಲ್ಲಿ ಅನಾವರಣಗೊಂಡಿದ್ದು ಇಂದಿಗೂ ಪ್ರಸ್ತುತವೆನಿಸಿವೆ.

ಸತ್ಯಕ್ಕನವರು ಸ್ವಾಭಿಮಾನಿಯಾಗಿ, ನಿಷ್ಠುರವಾದಿಯಾಗಿ ನಿಸ್ವಾರ್ಥ ಪ್ರಜ್ಞೆಯಿಂದ ಮಾನವನ ಕೆಲವೊಂದು ಹೀನ ಗುಣಗಳನ್ನು ಕಠೋರವಾಗಿ ಖಂಡಿಸಿದ್ದಾರೆ. ಇಂದಿನ ವಿಶ್ವದ ಜ್ವಲಂತ ಸಮಸ್ಯೆಯಾದ ಭ್ರಷ್ಟಾಚಾರ ಕುರಿತು ಪ್ರಸ್ತಾಪಿಸಿ ಅದರ ವಿರುದ್ಧ ಆಗಲೇ ಧ್ವನಿ ಎತ್ತಿದ್ದಾರೆ. ಮಾನವನು ಅತಿಯಾಸೆ ಮತ್ತು ದುರಾಸೆಗಳಿಂದ ಮುಕ್ತನಾಗಿ ಸ್ವಾಭಿಮಾನದಿಂದ ಸಮಾಜಮುಖಿಯಾಗಿ ಹೇಗೆ ಬಾಳಬೇಕು ಎಂಬ ಸಂದೇಶವನ್ನು ತಮ್ಮ ವಚನದ ಮೂಲಕ ಸ್ಪಷ್ಟಪಡಿಸಿದ್ದಾರೆ.

ಬಟ್ಟೆಯಲ್ಲಿ ಹೊನ್ನು ವಸ್ತ್ರ ಬಿದ್ದಿದ್ದರೆ
ನಾನು ಕೈಮುಟ್ಟಿ ಎತ್ತಿದೆನಾದರೆ
ನಿಮ್ಮಾಣೆ ನಿಮ್ಮ ಪ್ರಮಥರಾಣೆ
ಅದೇನು ಕಾರಣವೆಂದರೆ, ನೀವಿಕ್ಕಿದ ಭಿಕ್ಷದಲ್ಲಿಪ್ಪೆನಾಗಿ
ಇಂತಲ್ಲದೆ ನಾನು ಅಳಿಮನವ ಮಾಡಿ
ಪರದ್ರವ್ಯಕ್ಕೆ ಆಸೆ ಮಾಡಿದೆನಾದರೆ,
ನೀನಾಗಲೆ ಎನ್ನ ನರಕದಲ್ಲಿ ಅದ್ದಿ
ನೀನೆದ್ದು ಹೋಗಾ ಶುಂಭುಜಕ್ಕೇಶ್ವರಾ.

ದಾರಿಯಲ್ಲಿ ಬಂಗಾರ, ಧನಕನಕ ಸಂಪತ್ತು ಮತ್ತು ವಸ್ತ್ರ ಒಡವೆಗಳು ಏನೇ ಬಿದ್ದಿದ್ದರು ನಾನು ವ್ಯಾಮೋಹಿತಳಾಗುವದಿಲ್ಲ. ಅವುಗಳನ್ನು ಕೈ ಮುಟ್ಟಿ ಎತ್ತಿಕೊಳ್ಳುವದಿಲ್ಲ ಎನ್ನುತ್ತಾರೆ. ಒಂದು ವೇಳೆ ಕೈ ಮುಟ್ಟಿ ಎತ್ತಿಕೊಂಡರೆ ನಿಮ್ಮಾಣೆ ನಿಮ್ಮ ಪ್ರಮಥರಾಣೆ ಎಂಬ ಅವರ ಮಾತಿನಲ್ಲಿ ನಿಸ್ವಾರ್ಥದ ಪ್ರಜ್ಞೆ ಎದ್ದುಕಾಣುತ್ತದೆ. ಪರರ ದ್ರವ್ಯಕ್ಕೆ ಆಸೆ ಮಾಡಬಾರದು ಎಂಬ ಮಾತಿನಲ್ಲಿ ಭ್ರಷ್ಟಾಚಾರದ ವಿರೋಧ ನಿಲುವು ವ್ಯಕ್ತವಾಗಿದೆ. ನೀ ನೀಡಿದ ಭಾಗ್ಯದಲ್ಲಿಯೇ ಬದುಕುತ್ತೇನೆ. ಒಂದು ವೇಳೆ ದುರಾಸೆಯ ಬೆನ್ನತ್ತಿ ಪರರ ಸಂಪತ್ತಿಗೆ ಆಸೆ ಮಾಡಿದ್ದಾದರೆ ನರಕದಲ್ಲಿ ಎದ್ದಿ ಶಿಕ್ಷೆಕೊಡು ಎಂದು ಕೇಳುವ ಪರಿ ನ್ಯಾಯದ ಬದುಕಿಗೆ ಸಾಕ್ಷಿಯಾಗಿದೆ.

ಆದರೆ 21 ನೆಯ ಶತಮಾನದಲ್ಲಿ ಅನೇಕ ಜನರು ಸತ್ಯಕ್ಕನವರ ನೀತಿಗೆ ವ್ಯತಿರಿಕ್ತವಾಗಿ ವರ್ತಿಸುತ್ತಿದ್ದಾರೆ. ಎಲ್ಲ ರಂಗಗಳಲ್ಲಿ ಪರರ ಸಂಪತ್ತನ್ನು ಕಿತ್ತುಕೊಂಡು ತಿನ್ನುವ ಪ್ರವೃತ್ತಿ ಹೆಚ್ಚಾಗಿದೆ. ಸೇವೆಯ ನೆಪದಲ್ಲಿ ಸಮಾಜದ ಜನರನ್ನು ಮತ್ತು ಸರ್ಕಾರವನ್ನು ಸುಲಿಯುವ ಕಾರ್ಯ ಅವ್ಯಾಹತವಾಗಿ ಸಾಗಿದೆ. ಭ್ರಷ್ಟಾಚಾರ ಕಾನೂನಿಗೆ ವಿರುದ್ಧವಾದುದು ಎಂಬ ಸತ್ಯ ಗೊತ್ತಿದ್ದರು, ಒಮ್ಮೊಮ್ಮೆ ಶಿಕ್ಷೆಗೆ ಗುರಿಯಾಗಿ ತಲೆದಂಡವಾದರೂ ಪರದ್ರವ್ಯದ ವ್ಯಾಮೋಹದಿಂದ ಮುಕ್ತರಾಗುವದಿಲ್ಲ. ಇಂಥಹ ಸಂದಿಗ್ದತೆಯಲ್ಲಿ ವರ್ತಮಾನದ ಭ್ರಷ್ಟ ಮನಸುಗಳಿಗೆ ಸತ್ಯಕ್ಕನವರು ಪ್ರಸ್ತುತವೆನಿಸಿ ಕೆಲ ಮನಸುಗಳ ಬದಲಾವಣೆಗೆ ಸ್ಪೂರ್ತಿಯಾಗುತ್ತಾರೆ.

ಸತ್ಯಕ್ಕನವರು ತಮ್ಮ ಮತ್ತೊಂದು ವಚನದಲ್ಲಿ ಭ್ರಷ್ಟಾಚಾರದ ವಿರೋಧ ನಿಲುವನ್ನು ತಿಳಿಸಿದ ಪರಿ ತುಂಬಾ ಮನೋಜ್ಞವಾಗಿದೆ.

ಲಂಚ–ವಂಚನಕ್ಕೆ ಕೈಯಾನದ ಭಾಷೆ
ಬಟ್ಟೆಯಲ್ಲಿ ಹೊನ್ನು ವಸ್ತ್ರ ಬಿದ್ದಿದ್ದಡೆ
ಕೈ ಮುಟ್ಟೆ ಎತ್ತಿನಾದಡೆ, ಅಯ್ಯಾ ನಿಮ್ಮಾಣೆ!
ನೀವಿಕ್ಕಿದ ಬಿಕ್ಷೆಯೊಳಗಿಪ್ಪೆನಯ್ಯ
ಶಂಭುಜಕ್ಕೇಶ್ವರಾದೇವಯ್ಯಾ! ನಿಮ್ಮಾಣೆ

ಸತ್ಯಕ್ಕನವರು ಈ ವಚನದಲ್ಲಿ ಪದೇ ಪದೇ ನಿಮ್ಮಾಣೆ ನಿಮ್ಮಾಣೆ ಎಂಬ ಪದ ಬಳಸಿದ ರೀತಿ ಅವರ ಆತ್ಮವಿಶ್ವಾಸ ಮತ್ತು ಗಟ್ಟಿತನದ ಮನೋಧೋರಣೆಯನ್ನು ಪ್ರತಿನಿಧಿಸುತ್ತದೆ. ಪರಧನಕ್ಕೆ ಆಸೆ ಮಾಡುವುದು ಮತ್ತು ಅದಕ್ಕಾಗಿ ಹಾತೊರೆಯುವುದು ಶುದ್ಧ ತಪ್ಪು ಎನ್ನುತ್ತಾರೆ. ಮನುಷ್ಯ ಯಾವಾಗಲೂ ಚಿತ್ತಶುದ್ಧ ಮತ್ತು ಹಸ್ತಸುದ್ದನಾಗಿ ಜೀವಿಸಬೇಕು ಅಂದಾಗ ತಾವು ಮಾಡುವ ಕಾಯಕಕ್ಕೆ ನಿಜವಾದ ಅರ್ಥ ಪ್ರಾಪ್ತವಾಗುತ್ತದೆ ಎನ್ನುತ್ತಾರೆ. ಕಾನೂನಿಗಿಂತ ಮಾನವನಿಗೆ ತನ್ನ ಮನಸ್ಸಿನ ಮೇಲಿನ ನಿಯಂತ್ರಣ ಮುಖ್ಯವೆನ್ನುವ ಸತ್ಯಕ್ಕನವರು ನಮ್ಮ ಮನಸ್ಸೇ ಒಂದು ಪ್ರಬಲವಾದ ಕಾನೂನಾಗಿ ನಮ್ಮನ್ನು ಎಚ್ಚರಿಸುವಂತಹ ಕೆಲಸ ಮಾಡಬೇಕು ಎಂಬ ಕಿವಿಮಾತನ್ನು ಹೇಳುತ್ತಾರೆ. ವರ್ತಮಾನದಲ್ಲಿ ಹೆಮ್ಮರದ ರೀತಿಯಲ್ಲಿ ಬೆಳೆದು ನಿಂತ ಭ್ರಷ್ಟಾಚಾರವನ್ನು ಬೇರು ಸಹಿತ ಕಿತ್ತು ಹಾಕಬೇಕೆಂದರೆ ಸತ್ಯಕ್ಕನವರ ಸಮಾಜಮುಖಿ ಚಿಂತನೆಗಳನ್ನು ಎಲ್ಲರು ಅಧ್ಯಯನಿಸಿ, ಆಚರಣೆಗೆ ತರಬೇಕಾದ ಅವಶ್ಯಕತೆ ತುಂಬಾನೇ ಇದೆ. ಸತ್ಯಕ್ಕನವರ ವಿಚಾರಧಾರೆಗಳು ನೂರರಲ್ಲಿ ಹತ್ತು ಜನರನ್ನಾದರು ಪರಿವರ್ತಿಸಬಲ್ಲವು ಎಂಬ ಆಶಾಭಾವದಿಂದ ಸತ್ಯಕ್ಕನವರನ್ನು ಯುವಜನತೆಗೆ ಪರಿಚಯಿಸಬೇಕಾಗಿದೆ.

ಸತ್ಯಕ್ಕನವರ ಮತ್ತೊಂದು ಶ್ರೇಷ್ಟ ಸಮಾಜಮುಖಿ ಚಿಂತನೆಯೆಂದರೆ ಸ್ತ್ರೀ ಸಮಾನತೆಯಾಗಿದೆ. ಪುರುಷ ಪ್ರಧಾನ ಸಮಾಜದಲ್ಲಿ ಪರಂಪರಾಗತವಾಗಿ ಮಹಿಳೆ ಅನುಭವಿಸುವ ಶೋಷಣೆಗಳನ್ನು ಕಣ್ಣಾರೆ ಕಂಡ ಅವರು ಲಿಂಗ ತಾರತಮ್ಯವನ್ನುಕಟುವಾಗಿ ವಿರೋಧಿಸುತ್ತಾರೆ. ಧರ್ಮ, ಶಾಸ್ತ್ರ, ಪುರಾಣಗಳ ಬೆನ್ನು ಬಿದ್ದು ಸ್ತ್ರೀ ಸ್ವಾತಂತ್ರ್ಯವನ್ನು ಕಿತ್ತುಕೊಂಡ ಬಗೆಯನ್ನು ಪ್ರಶ್ನಿಸಿದ ಸತ್ಯಕ್ಕನವರು ಸ್ತ್ರೀಗೆ ಸಮಾಜದಲ್ಲಿ ಸ್ವಾಭಿಮಾನದ ಸ್ಥಾನವನ್ನು ತಂದುಕೊಡಲು ಹೋರಾಡಿ ವಚನವೊಂದನ್ನು ರಚಿಸಿದ್ದಾರೆ.

ಮೊಲೆ ಮುಡಿ ಇದ್ದುದೆ ಹೆಣ್ಣೆಂದು ಪ್ರಮಾಣಿಸಲಿಲ್ಲ
ಕಾಸೆ ಮೀಸೆ ಕಠಾರವಿದ್ದುದೆಗಂಡೆಂದು ಪ್ರಮಾಣಿಸಲಿಲ್ಲ
ಅದು ಜಗದ ಹಾಹೆ, ಬಲ್ಲವರ ನೀತಿಯಲ್ಲ
ಏತರ ಹಣ್ಣಾದರೂ ಮಧುರವೆಕಾರಣ,
ಅಂದವಿಲ್ಲದ ಕುಸುಮಕ್ಕೆ ವಾಸನೆಯ ಕಾರಣ
ಇದರಂದವ ನೀನೆ ಬಲ್ಲೆ ಶಂಭುಜಕ್ಕೇಶ್ವರ

ಭೌತಿಕ ಸಂರಚನೆಯ ಆಧಾರದ ಮೇಲೆ ಗಂಡು ಹೆಣ್ಣೆಂದು ವಿಂಗಡಿಸಿ ಬೆಲೆ ಕಟ್ಟುವ ಕೆಲಸ ಮಾಡಬಾರದೆಂದು ಸತ್ಯಕ್ಕನವರು ಪುರುಷ ಸಮಾಜದ ವಿರುದ್ಧ ಸಿಡಿದೇಳುತ್ತಾರೆ. ಗಂಡು ಶ್ರೇಷ್ಟ ಹೆಣ್ಣು ಕನಿಷ್ಟವೆಂದು ಭಾವಿಸುವುದು ಸಾಧುವಲ್ಲ. ಪುಷ್ಪಕ್ಕೆ ಕೇವಲ ಅದರ ಬಾಹ್ಯ ಸೌಂದರ್ಯ ಮುಖ್ಯವಲ್ಲ ಸುವಾಸನೆಯೇ ಮುಖ್ಯವೆಂದು ಹೇಳಿ ದೇಹರಚನೆಗಿಂತ ಅವಳಲ್ಲಿರುವ ಆತ್ಮಜ್ಞಾನ ಮತ್ತು ಗುಣ ಸ್ವಭಾವ ಮುಖ್ಯ ಎಂಬ ನಿಲುವನ್ನು ಪ್ರತಿಪಾದಿಸಿ ಪುರುಷ ಸಮಾಜದ ಕಣ್ಣು ತೆರೆಸುವ ಕಾರ್ಯ ಮಾಡುತ್ತಾರೆ.

ಇಂದು ವಿಶ್ವದ ತುಂಬ ಸಂವಿಧಾನಾತ್ಮಕವಾಗಿ ಸ್ತ್ರೀಗೆ ಏನೆಲ್ಲ ಸ್ಥಾನಮಾನ, ಸೌಲಭ್ಯಗಳನ್ನು ನೀಡಿದ್ದರು ಕಾಗದದ ಮೇಲಿನ ಹುಲಿಗಳಂತಾಗಿವೆ. ಲಿಂಗ ತಾರತಮ್ಯ ಇನ್ನು ಜೀವಂತವಾಗಿರುವ ಹಿನ್ನೆಲೆಯಲ್ಲಿ ಸತ್ಯಕ್ಕನವರ ಈ ವಚನದ ಮಹತ್ವವನ್ನು ನಾವೆಲ್ಲ ಅರಿಯಬೇಕಾಗಿದೆ.

ಸತ್ಯಕ್ಕನವರ ಸಮಾಜಮುಖಿ ಚಿಂತನೆ ತುಂಬ ಹರಿತವಾದುದು. ಡಾಂಭಿಕ ಭಕ್ತಿಯನ್ನು ಬಿಟ್ಟು ಶುದ್ಧ ಭಕ್ತಿಯನ್ನು ಅನುಷ್ಠಾನ ಮಾಡಿಕೊಳ್ಳಬೇಕೆಂದು ಹೇಳುತ್ತಾರೆ. ಆಡಂಬರಕ್ಕಾಗಿ ಅರಮನೆಗಳಿಗಿಂತ ದೊಡ್ಡದಾದ ಮಸೀದಿ ಮಂದಿರಗಳನ್ನು ಕಟ್ಟಿ ದೇವರ ಹೆಸರಲ್ಲಿ ರಕ್ತಪಾತ ಮಾಡುವ ಹೇಯ ಕೃತ್ಯವನ್ನು ವಿರೋಧಿಸುತ್ತಾರೆ.

ಅರ್ಚನೆ ಪೂಜನೆ ನೇಮವಲ್ಲ;
ಮಂತ್ರತಂತ್ರ ನೇಮವಲ್ಲ;
ದೂಪ ದೀಪಾರತಿ ನೇಮವಲ್ಲ
ಪರಧನ ಪರಸ್ತ್ರೀ ಪರದೈವಂಗಳಿಗೆರಗದಿಪ್ಪುದೆ ನೇಮ
ಶಂಭುಜಕ್ಕೇಶ್ವರನಲ್ಲಿ ಇವು ಕಾಣಿರಣ್ಣಾ, ನಿತ್ಯನೇಮ

ಭಗವಂತನನ್ನು ಆರಾಧಿಸಲು ಅಂತರಂಗದ ನಿಜಭಕ್ತಿ ಮಾತ್ರ ಸಾಕು. ಮಂತ್ರತಂತ್ರ, ದೂಪ ದೀಪಾರತಿ, ಹೂವು – ಹಣ್ಣು– ಕಾಯಿ ಬೇಕೆಂಬ ನಿಯಮ ಬರಿ ಭ್ರಮೆ ಎನ್ನುತ್ತಾರೆ. ಭಕ್ತಿ ಪ್ರತಿಷ್ಠೆಯಾದಲ್ಲಿ ಧರ್ಮಾಂಧತೆಗೆ ಮತ್ತು ಮೂಢನಂಬಿಕೆಗೆ ಕಾರಣವಾಗುತ್ತದೆ. ವೈಚಾರಿಕ ಭಕ್ತಿಯೇ ಸರ್ವಶ್ರೇಷ್ಟ ಭಕ್ತಿಯೆಂಬ ಅವರ ಮಾತನ್ನು ನಾವೆಲ್ಲ ತಿಳಿಯಬೇಕಾದ ಅವಶ್ಯಕತೆಯಿದೆ.
ಶರಣನಾದವನು ಸದಾ ಸ್ವಾಭಿಮಾನಿಯಾಗಿ ಮತ್ತು ಸ್ವಾವಲಂಬಿಯಾಗಿ ಜೀವಿಸಬೇಕು ಎಂಬ ಸತ್ಯಕ್ಕನವರ ನೇರ ನುಡಿಯು ಕೆಳಗಿನ ವಚನದಲ್ಲಿ ವಿಜೃಂಭಿಸುತ್ತದೆ.

ಭವಿಯ ಬೆರಸಿದ ಭಕ್ತಿ ಹವಿಯ ಬೆರಸಿದ ಬೀಜ
ಉದಕ ಬೆರಸಿದ ಎಣ್ಣೆಜ್ಯೋತಿ ಪ್ರಜ್ವಲಿಸುವುದೆ?
ಭವಿಯಲ್ಲ ಭಕ್ತನಲ್ಲ, ಹವಿಯಲ್ಲ ಬೀಜವಲ್ಲ
ಉದಕವಲ್ಲ ಎಣ್ಣೆಯಲ್ಲ
ಒಡಲಿಚ್ಚೆಗೆ ಹೋಗಿ ಭವಿಯ ಮನೆಗೆ ತುತ್ತಿಡುವ
ನರಕಿಳಿಗೇಕೊಲಿವ ನಮ್ಮ ಶಂಭುಜಕ್ಕೇಶ್ವರನು.

ಸತ್ಯಕ್ಕನವರ ಈ ಮಾತು ಸ್ವಾಭಿಮಾನದ ಪ್ರತೀಕವಾಗಿದೆ. ಶರಣನಾದವನು ಯಾವತ್ತು ಬೇಡಿತಿನ್ನ ಬಾರದು ಎನ್ನುತ್ತಾರೆ. ಯಾವದಾದರು ಒಂದು ಕಾಯಕದಿಂದ ಜೀವಿಸಬೇಕು ಮತ್ತು ಅದರ ಜೊತೆಗೆ ದಾಸೋಹ ಮಾಡಿ ಶ್ರೇಷ್ಟ ಜಂಗಮನೆನಿಸಿ ಜನಸೇವೆ ಮಾಡಬೇಕೆಂದು ಕರೆ ನೀಡುತ್ತಾರೆ. ಮತ್ತು ಪರಾವಲಂಬಿ ಬದುಕನ್ನು ತಿರಸ್ಕರಿಸುತ್ತಾರೆ. ಒಂದು ಸಮಾಜದ ಉನ್ನತಿ ಪ್ರತಿ ದುಡಿಯುವ ಕೈಗಳನ್ನು ಅವಲಂಬಿಸಿದೆ ಎಂಬ ಅವರ ಮಾತು ಇಂದಿನ ಯುವ ಪೀಳಿಗೆಗೆ ಪ್ರಸ್ತುತವೆನಿಸುತ್ತದೆ.

**ಉಪಸಂಹಾರ**

ಹೀಗೆ ಸತ್ಯಕ್ಕನವರು ಅನೇಕ ಸಮಾಜಮುಖಿ ಚಿಂತನೆಗಳನ್ನು ತಮ್ಮ ಎಲ್ಲ ವಚನಗಳ ಮೂಲಕ ಸಾದರಪಡಿಸಿದ್ದಾರೆ. ಅವರ ಸಾಮಾಜಿಕ ಕಳಕಳಿ ಮತ್ತು ವೈಚಾರಿಕ ನಿಲುವು ಸುಂದರ ಸಮಾಜದ ರಚನೆಗೆ ಪ್ರೇರಕ ಶಕ್ತಿಗಳಾಗಿವೆ. ಅವರ ಸತ್ಯನಿಷ್ಠೆ ಮತ್ತು ಕಾಯಕ ನಿಷ್ಠೆ ಹಾಗೂ ಸ್ವಾಭಿಮಾನದ ಗುಣವನ್ನು ನಾವೆಲ್ಲ ಬೆಳಸಿಕೊಳ್ಳಬೇಕಾಗಿದೆ. ಕಾರಣ ಸತ್ಯಕ್ಕನವರ ಪ್ರಸ್ತುತತೆಯನ್ನು ನಾವು ಮನಗಾಣಬೇಕಾಗಿದೆ.

**ಪರಾಮರ್ಶನ ಗ್ರಂಥಗಳು**


1. ಡಾ. ಎಂ.ಎಂ. ಕಲಬುರ್ಗಿ, ವಚನ: ಶಿವಶರಣರ ವಚನಗಳ ಸಂಕಲನ, ಪ್ರಕಾಶಕರು ಬಸವ ಸಮಿತಿ ಬಸವ ಭವನ ಬೆಂಗಳೂರು, 2012
2. ಪ್ರಕಾಶ. ಈ. ರ. ಶೆಟ್ಟಿ, ಹನ್ನೆರಡನೇ ಶತಮಾನದ ಶರಣ ದಂಪತಿಗಳ ದರ್ಶನ, ಚೆನ್ನಬಸವ ಪೌಂಡೇಶನ್ (ರಿ), ಬೆಳಗಾವಿ 2020
3. ಮರುಳಸಿದ್ದಯ್ಯ ಎಚ್.ಎಂ, ಅರಿವು ಆಚರಣೆ, ಕನ್ನಡ ಸಾಹಿತ್ಯ ಪರಿಷತ್ತು ಬೆಂಗಳೂರು, 2004
4. ಸಿದ್ದಯ್ಯ ಪುರಾಣಿಕ, ಶರಣ ಚರಿತ್ರಾಮೃತ, ವಯಸ್ಕರ ಶಿಕ್ಷಣ ಸಮಿತಿ ಮೈಸೂರು, 1960
5. ಆರ್.ಸಿ. ಹಿರೇಮಠ ಧಾರವಾಡ, ಇಪ್ಪತ್ತೇಳು ಶಿವಶರಣೆಯರ ವಚನಗಳು, ಭಾಗ–3, 1968
6. ಫ.ಗು. ಹಳಕಟ್ಟಿ ಶಿವಶರಣರ ಚರಿತ್ರೆಗಳು ಭಾಗ–1, 1944
7. ಶ್ರೀನಿವಾಸಮೂರ್ತಿ ಎನ್. ಆರ್, ವಚನ ಧರ್ಮಾನುಸಾರ, ಕನ್ನಡ ಸಾಹಿತ್ಯ ಪರಿಷತ್ತು ಬೆಂಗಳೂರು, 2012
8. ಫ.ಗು. ಹಳಕಟ್ಟಿ, ಅರವತ್ತಮೂರು ಶಿವಶರಣರ ಚರಿತ್ರೆಗಳು ಭಾಗ–2,
9. ಶರಣಕಥಾ ಮಾಲೆ, ಬಸವ ಸಮಿತಿ ಬೆಂಗಳೂರು.
10. ಬಸವ ಪಥ ಮಾಸ ಪತ್ರಿಕೆಗಳು, ನಿಯತಕಾಲಿಕೆಗಳು.